**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್, ಇವರ ನಿಯಮ-72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:115ರಡಿ ಕೇಳಿರುವ ಪ್ರಶ್ನೆಗೆ ಉತ್ತರಿಸುವ ಬಗ್ಗೆ.**

**ವಿಷಯ:**

ರಾಜ್ಯದಲ್ಲಿ ಅಂದಾಜು 6,500 ಕ್ಕೂ ಹೆಚ್ಚಿನ ಏಕಶಿಕ್ಷಕ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇವೆಲ್ಲವೂ ಸಾಮಾನ್ಯವಾಗಿ ಮೂಲಸೌಕರ್ಯ ಕಲ್ಪಿಸದ ಕುಗ್ರಾಮಗಳಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು, ನಲಿ-ಕಲಿ ಯೋಜನೆಯನ್ನು ರದ್ದುಪಡಿಸುವುದರಿಂದ ಈ ಎಲ್ಲಾ ಏಕಶಿಕ್ಷಕ ಶಾಲೆಗಳು ಶಾಶ್ವತವಾಗಿ ತೆರೆಮರೆಗೆ ಸರಿಯಲಿದ್ದು, ಆ ಕುಗ್ರಾಮಗಳ ಮಕ್ಕಳು ಶಿಕ್ಷಣದಿಂದ ಶಾಶ್ವತವಾಗಿ ವಂಚಿತರಾಗುವ ಅಪಾಯ ಎದುರಾಗಿದೆ.

ಈಗಾಗಲೇ, ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ಮತ್ತು ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆಗಳ ವಿಲೀನ ಪ್ರಕ್ರಿಯೆ ವೇಗವಾಗಿ ನಡೆಯುತ್ತಿದೆ. ಇದರ ಜತೆಗೆ ಏಕಶಿಕ್ಷಕ ಶಾಲೆಗಳು ಕೂಡ ಸೇರಿದ್ದಲ್ಲಿ, ಕುಗ್ರಾಮಗಳ ಮಕ್ಕಳು ಶಿಕ್ಷಣ ಪಡೆಯುವ ವ್ಯವಸ್ಥೆಗೆ ಈ ನಿರ್ಣಯ ಮರಣಶಾಸನವಾಗಿ ಪರಿಣಮಿಸಲಿದ್ದು ಸರ್ಕಾರದ ಈ ನಿಲುವಿನಿಂದ ಕುಗ್ರಾಮಗಳ ಮಕ್ಕಳ ಶಾಶ್ವತವಾಗಿ ಶಿಕ್ಷಣದಿಂದ ವಂಚಿತರಾಗುವ ಎಲ್ಲಾ ಅಪಾಯವಿದ್ದು ಈ ಗಂಭೀರ ಸಮಸ್ಯೆ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ:**

ಪ್ರಸ್ತುತ ರಾಜ್ಯದಲ್ಲಿ 46,675 ಸರ್ಕಾರಿ ಶಾಲೆಗಳಿದ್ದು ಇವುಗಳಲ್ಲಿ 41,776 ಶಾಲೆಗಳು ಸರ್ಕಾರಿ ಪ್ರಾಥಮಿಕ ಶಾಲೆಗಳಾಗಿರುತ್ತವೆ. ಈ ಪೈಕಿ 19,567 ಶಾಲೆಗಳು ಕಿರಿಯ ಪ್ರಾಥಮಿಕ, 21,430 ಹಿರಿಯ ಪ್ರಾಥಮಿಕ ಶಾಲೆಗಳಿರುತ್ತವೆ. ಈ ಶಾಲೆಗಳಲ್ಲಿ ಒಟ್ಟಾರೆಯಾಗಿ 28,96,827 ವಿದ್ಯಾರ್ಥಿಗಳು ದಾಖಲಾಗಿದ್ದು ಒಟ್ಟು 1,06,325 ಪ್ರಾಥಮಿಕ ಶಾಲಾ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಪರಿಶೀಲಿಸಿದಾಗ, 2024 ರಲ್ಲಿ NCERTಯು ನಡೆಸಿದ PARAKH (Performance Assessment, Review and Analysis of Knowledge for Holistic development) RASHTRIYA SARVEKSHAN ದಲ್ಲಿ ಶೇ.50 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ನಿಗದಿಪಡಿಸಿದ ಸಾಮರ್ಥ್ಯಗಳನ್ನು ಗಳಿಸಿರುವುದು ಕಂಡುಬಂದಿರುತ್ತದೆ. ಭಾಷಾ ಕಲಿಕೆಯಲ್ಲಿ ರಾಜ್ಯದ 3ನೇ ತರಗತಿಗಳ ವಿದ್ಯಾರ್ಥಿಗಳು ಶೇ.60 ಸಾಧನೆಯನ್ನು ಮಾಡಿದ್ದು ರಾಷ್ಟ್ರಮಟ್ಟಕ್ಕಿಂತ ಶೇ.4 ರಷ್ಟು ಕಡಿಮೆ ಸಾಧನೆಯನ್ನು ಮಾಡಿದ್ದು, ಗಣಿತ ವಿಷಯದಲ್ಲಿ ರಾಷ್ಟ್ರಮಟ್ಟಕ್ಕಿಂತ ಶೇ.3 ರಷ್ಟು ಕಡಿಮೆ ಸಾಧನೆಯನ್ನು ಮಾಡಿರುತ್ತಾರೆ. ರಾಜ್ಯದ ವಿದ್ಯಾರ್ಥಿಗಳು 6ನೇ ತರಗತಿಯ ವಿದ್ಯಾರ್ಥಿಗಳು ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ರಾಷ್ಟ್ರಮಟ್ಟಕ್ಕಿಂತ ಕ್ರಮವಾಗಿ ಶೇ.2, ಶೇ.1 ಮತ್ತು ಶೇ.1 ರಷ್ಟು ಕಡಿಮೆ ಸಾಧನೆ ತೋರಿಸಿರುತ್ತಾರೆ. ಇದರಿಂದ ಕಿರಿಯ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವು ಹಿರಿಯ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟಕ್ಕಿಂತ ಕಡಿಮೆ ಇರುವುದು ಕಂಡುಬರುತ್ತದೆ.

2024ರ ASER (Annual Status of Education Report) ವರದಿಯಲ್ಲಿ ಕರ್ನಾಟಕದ 1ನೇ ತರಗತಿ (ಶೇ.89) ಮತ್ತು 2ನೇ ತರಗತಿಯಲ್ಲಿ (ಶೇ.87.7) ವಿದ್ಯಾರ್ಥಿಗಳು ಬಹುವರ್ಗ ಬೋಧನೆಗೆ ಒಳಪಟ್ಟಿದ್ದು ವಿವಿದ ತರಗತಿಗಳ ವಿದ್ಯಾರ್ಥಿಗಳು ಒಂದೇ ತರಗತಿಯಲ್ಲಿ ವ್ಯಾಸಂಗ ಮಾಡುವುದರಿಂದ ಕಲಿಕಾ ಮಟ್ಟದಲ್ಲಿ ಕುಸಿತವನ್ನು ಕಾಣಬಹುದಾಗಿದೆ ಎಂದು ಅಭಿಪ್ರಾಯಿಸಲಾಗಿದೆ. ಮುಂದುವರೆದು ಸರ್ಕಾರಿ ಶಾಲೆಗಳ 3ನೇ ತರಗತಿಯ ಶೇ.15 ವಿದ್ಯಾರ್ಥಿಗಳು ಮಾತ್ರ 2ನೇ ತರಗತಿ ಮಟ್ಟದ ಪಠ್ಯವನ್ನು ಓದಲು ಶಕ್ತರಾಗಿರುತ್ತಾರೆ. ಶೇ.66 ರಷ್ಟು 3 ಮತ್ತು 5ನೇ ತರಗತಿ ವಿದ್ಯಾರ್ಥಿಗಳು ಸರಳಗಣಿತದ ಸಮಸ್ಯೆಗಳನ್ನು ಬಿಡಿಸಲು ಕಷ್ಟಪಡುವುದನ್ನು ಗಮನಿಸಲಾಗಿದೆ ಎಂದು ಅಭಿಪ್ರಾಯಿಸಲಾಗಿದೆ. 2022ರಲ್ಲಿ ಶೇ.76 ರಷ್ಟು ಇದ್ದ ದಾಖಲಾತಿ ಪ್ರಮಾಣವು 2024ರಲ್ಲಿ ಶೇ.71 ಗೆ ಇಳಿಕೆಯಾಗಿರುವುದನ್ನು ಸಹ ಗಮನಿಸಲಾಗಿದೆ.

2009-10ನೇ ಸಾಲಿನಿಂದ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳ ಕೊರತೆ, ವಲಸೆ ಹೋಗುವ ಕುಟುಂಬಗಳ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಮಧ್ಯಾಂತರದಲ್ಲಿ ತರಗತಿಗಳಿಗೆ ಪ್ರವೇಶ ಪಡೆಯುವ ಸಮಸ್ಯೆಯಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉಂಟಾಗಿದ್ದ ಒತ್ತಡವನ್ನು ಕಡಿಮೆ ಮಾಡಲು ಅನೇಕ ಪ್ರಯತ್ನಗಳನ್ನು ಮಾಡಲಾಗಿರುತ್ತದೆ. ಇವುಗಳಲ್ಲಿ ಬೋಧನೆಯ ಕಲಿಕಾ ವಿಧಾನವು ಒಂದಾಗಿರುತ್ತದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಕ್ರಮೇಣವಾಗಿ ಬಲಪಡಿಸಲಾಗುತ್ತಿದ್ದು, ಶಿಕ್ಷಕರನ್ನು ಹಾಗೂ ಭೌತಿಕ ಸೌಲಭ್ಯಗಳನ್ನು ಒದಗಿಸಲಾಗಿರುವುದರಿಂದ ಇಂದಿನ ಸನ್ನಿವೇಶಕ್ಕೆ ಬಹುವರ್ಗ ಕಲಿಕಾ ವಿಧಾನವು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿರುತ್ತದೆ.

ಸುಮಾರು 7000 ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದ್ದು, ಸದರಿ ತರಗತಿಗಳಿಗೆ ಏಕತರಗತಿ ಬೋಧನಾ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಸದರಿ ವಿದ್ಯಾರ್ಥಿಗಳು ಏಕ ತರಗತಿ ಪದ್ಧತಿಯಿಂದ ಬಹುವರ್ಗ ಬೋಧನಾ ಪದ್ಧತಿ ಹೊಂದಿರುವ ಪ್ರಾಥಮಿಕ ತರಗತಿಗಳಿಗೆ ಸೇರಲು ಹಿಂಜರಿಯುತ್ತಿರುವುದನ್ನು ಗಮನಿಸಲಾಗಿದೆ. ಈಗಾಗಲೇ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯು ಶೇ.46 ರಿಂದ ಶೇ.38 ಕ್ಕೆ ಕುಸಿದಿದ್ದು, ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು ಏಕ ತರಗತಿ ಬೋಧನೆಗೆ ಒಳಪಡಿಸಲು ಇಚ್ಛಿಸುತ್ತಿರುವುದು ದಾಖಲಾತಿ ಪ್ರಮಾಣವು ಇಳಿಕೆಯಾಗುವುದಕ್ಕೆ ಕಾರಣವಾಗಿರುತ್ತದೆ. ಇದಲ್ಲದೇ ಖಾಸಗಿ ಶಾಲೆಗಳು ಪ್ರಾಥಮಿಕ ತರಗತಿಗಳಿಗೆ ಬಹುವರ್ಗ ಬೋಧನಾ ಪದ್ಧತಿ ಹೊಂದಿರುವುದಿಲ್ಲ.

ಈ ಮೇಲಿನ ಕಾರಣಗಳನ್ನು ಗಣನೆಗೆ ತೆಗೆದುಕೊಂಡು ಕಾಲಕಾಲಕ್ಕೆ ಸರ್ಕಾರವು ಅನೇಕ ಅಗತ್ಯ ಉಪಕ್ರಮಗಳನ್ನು ಜಾರಿಗೊಳಿಸುತ್ತಾ ಬಂದಿದೆ. ಅದರಂತೆ ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳಲ್ಲಿ 2018-19ನೇ ಸಾಲಿನಿಂದ 2025-26 ನೇ ಸಾಲಿನವರೆಗೆ ವಿವಿಧ ಹಂತಗಳಲ್ಲಿ 9522 ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಬೋಧನಾ ಕ್ರಮವನ್ನು ಅನುಷ್ಠಾನಗೊಳಿಸಲು ಅನುಮತಿಸಲಾಗಿರುತ್ತದೆ. ಅಲ್ಲದೇ ಪ್ರಸಕ್ತ ಸಾಲಿನಲ್ಲಿ 474 ಕೆಪಿಎಸ್, 100 ಉರ್ದು ಕೆಪಿಎಸ್, ಕೆ.ಕೆ.ಆರ್.ಡಿ.ಬಿ ವತಿಯಿಂದ 200 ಕೆಪಿಎಸ್ ಶಾಲೆಗಳು, ಈ ಹಿಂದೆ ಅನುಮತಿ ಪಡೆದು ನಡೆಯುತ್ತಿರುವ 309 ಕೆಪಿಎಸ್ ಶಾಲೆಗಳು ಒಳಗೊಂಡಂತೆ ಒಟ್ಟು 1083 ಕೆಪಿಎಸ್ ಶಾಲೆಗಳು, 10 CEPMIZ ತಾಲ್ಲೂಕುಗಳಲ್ಲಿ ಉನ್ನತೀಕರಿಸಲಾಗುತ್ತಿರುವ 100 KPS ಶಾಲೆಗಳು, 585 ಪಿಎಂಶ್ರೀ ಶಾಲೆಗಳಲ್ಲಿ 01 ರಿಂದ 05ನೇ ತರಗತಿ ದ್ವಿಭಾಷಾ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲು

ಅನುಮತಿ ನೀಡಲಾಗಿದೆ. ಈ ವರೆವಿಗೆ 6675 ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಪೂರ್ವ ಪ್ರಾಥಮಿಕ ತರಗತಿಗಳಿಗೆ ಅನುಮತಿ ನೀಡಲಾಗಿರುತ್ತದೆ

ಸರ್ಕಾರಿ ಶಾಲೆಗಳಲ್ಲಿ 01 ರಿಂದ 05ನೇ ತರಗತಿಗೆ ದ್ವಿಭಾಷಾ ಮಾಧ್ಯಮ ತರಗತಿಗಳು ಪಠ್ಯ ಪುಸ್ತಕ ಆಧಾರಿತ ಏಕ ತರಗತಿ ಬೋಧನೆಯಂತೆ ಕಾರ್ಯ ನಿರ್ವಹಿಸುತ್ತಿವೆ. ಇದರಿಂದ ಒಂದೇ ಶಾಲೆಯಲ್ಲಿ ಕನ್ನಡ ಮಾಧ್ಯಮದ 01 ರಿಂದ 03ನೇ ತರಗತಿಗಳು ನಲಿ-ಕಲಿ ಬಹುವರ್ಗ ಕಲಿಕಾ ವಿಧಾನವನ್ನು ಮತ್ತು ದ್ವಿಭಾಷಾ ತರಗತಿಗಳಲ್ಲಿ ಏಕ ತರಗತಿ ಕಲಿಕಾ ವ್ಯವಸ್ಥೆಯಲ್ಲಿ ಇರುವುದನ್ನು ಗಮನಿಸಲಾಗಿದೆ. ಈ ಎಲ್ಲಾ ಶಾಲೆಗಳಲ್ಲಿ ಏಕರೂಪದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸಬೇಕಿರುತ್ತದೆ.

ಪ್ರಸ್ತುತ ಸ್ಪರ್ಧಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿ ಬೋಧನಾ ಕಲಿಕಾ ವಿಧಾನವನ್ನು ಪರಿಷ್ಕರಿಸುವ ಅಗತ್ಯತೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಮತ್ತು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಏಕರೂಪದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸಲು 2026-27ನೇ ಸಾಲಿನಿಂದ ಮೊದಲ ಹಂತದಲ್ಲಿ ರಾಜ್ಯದ ಎಲ್ಲಾ ಕೆ.ಪಿ.ಎಸ್, ಪಿ.ಎಂ.ಶ್ರೀ ಶಾಲೆಗಳು ಮತ್ತು ಆಯ್ದ 15 ಜಿಲ್ಲೆಗಳ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ನಲಿಕಲಿ ಕಲಿಕಾ ವಿಧಾನದ ಬದಲು 01 ರಿಂದ 05ನೇ ತರಗತಿವರೆಗೆ ದ್ವಿಭಾಷಾ ಏಕ ತರಗತಿ ಪಠ್ಯ ಪುಸ್ತಕ ಆಧಾರಿತ ಬೋಧನಾ ಕಲಿಕಾ ಪದ್ಧತಿಯನ್ನು ಅಳವಡಿಸಲಾಗುತ್ತಿದೆ. ಈ ಶಾಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಶಾಲೆಗಳಲ್ಲಿ 2026-27ನೇ ಸಾಲಿಗೆ ನಲಿ-ಕಲಿ ಕಾರ್ಯಕ್ರಮವನ್ನು ಮುಂದುವರೆಸಲಾಗುತ್ತಿದೆ.

**ಸಂಖ್ಯೆ: ಇಪಿ 106 ಯೋಸಕ 2026**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**